ಎಂತದ್ದೋ ಅಂತಾರಲ್ಲ ಅದನ್ನ ತಂದ್ರಾಗದ?' ಅಜ್ಜಿ ಅಮ್ಮ ಇಬ್ಬರೂ ಆಗಾಗ ತಕರಾರು ಎತ್ತಿದರೂ ಅಪ್ಪಯ್ಯ ಅಲುಗಾಡುತ್ತಿರಲಿಲ್ಲ. ಒಂದು ದಿನ ಬೋಗುಣಿಯಲ್ಲಿದ್ದ ಮಜ್ಜಿಗೆ ಕಿಲುಬಿ ಹಸಿರುಬಣ್ಣ ಬಿಟ್ಟುಕೊಂಡಿತ್ತು. ಅಮ್ಮ ಅಜ್ಜಿಯಕಡೆ ನೋಡಿದಾಗ ಅಜ್ಜಿ, 'ಅವನಿಗೆ ಹೇಳದು ಒಂದೆ; ದೇವಸ್ಥಾನದ ಕಲ್ಲಿನ ಬಸವಣ್ಣಗೆ ಹೇಳದು ಒಂದೆ. ಆ ಕಲಗಾರ ಸಾಬನೂ ಬರದೆ ಎತ್ಲಾಗೆ ಹಾಳಾಗಿಹೋದ್ನೋ' ಅಂತ ಅಪ್ಪಯ್ಯನ ಕಡೆ ನೋಡುತ್ತ ಮಜ್ಜಿಗೆಯನ್ನು ಬಸಕ್ಕೆಂದು ಹಿತ್ತಲಿಗೆ ಎರಚಿ ಬಂದಳು. ತಿಂಗಳ ನಂತರ ಬಂದ ಕಲಗಾರ ಸಾಬರು ಎರಡುದಿನ ತಮ್ಮ ಮನೆಯ ಪಾತ್ರೆಗಳಿಗೆ ಕಲಾಯಿ ಮಾಡುವುದರಲ್ಲೆ ಕಳೆದಿದ್ದರು. ಮೊದಲ ಹೆಂಡತಿ ಮಗುಸಮೇತ ಹೆರಿಗೆಯಲ್ಲಿ ತೀರಿಕೊಂಡದ್ದಕ್ಕೆ ಇಲ್ಲೆಲ್ಲ ಪ್ರಯತ್ನಿಸಿ ಸೋತು, ಅಪ್ಪಯ್ಯ ಮಲಬಾರಿಗೆ ಹೋಗಿ ತನ್ನಮ್ಮನನ್ನು ಮದುವೆ ಮಾಡಿಕೊಂಡು ಬಂದಿದ್ದ. ಆಮೇಲೂ ಗುರುವಾಯೂರು, ಕಾಂಞಂಗಾಡು ಅಂತ ಆಗಾಗ ಹೋಗುತ್ತಿದ್ದವ ಅಲ್ಲಿಯ ತರವಾಡು ಮನೆಗಳಲ್ಲಿ ದೇವಳಗಳಲ್ಲಿ ನೋಡಿದ ಪಾತ್ರೆಗಳ ಆಕರ್ಷಣೆಗೊಳಗಾದ. ದಪ್ಪನೆಯ ಹಿತ್ತಾಳೆಯ ಕೊಂಬಿನ ಗಿಂಡಿ, ಅಗಲಗಲದ ಉರಳಿಗಳು, ಹಬೆಯಲ್ಲಿ ಬೇಯಿಸುವ ಕಂಚಿನ ಪಾತ್ರೆ ಎಲ್ಲ ಅಲ್ಲಿಂದ ತಂದವೇ. ಒಂದೂವರೆ ಅಡಿ ವ್ಯಾಸವಿರಬಹುದಾದ ನಾಲ್ಕಿಂಚೆತ್ತರದ ಹಿತ್ತಾಳೆಯ ಉರಳಿ ಒಂದೊಂದೂ ಹದಿನೈದಿಪ್ಪತ್ತು ಕಿಲೊ ಭಾರದವು. ದಪ್ಪವೇ ಅರ್ಧ ಇಂಚಿರಬಹುದಾದ ಅದರಲ್ಲಿ ಪಾಯಸ ಮಾಡಿದರೆ ಅದರ ರುಚಿಯೆ ಅದ್ಭುತ! ಕೇರಳದ ಅಂಬಲಗಳಲ್ಲಿ ಇದರಲ್ಲೆ ತೆಂಗಿನಕಾಯಿ 'ತೇಂಙಪ್ರಥಮನ್' ಮಾಡಾದು ಅಂತ ತನಗೆ ಅಲ್ಲಿ ಸಿಕ್ಕ ಉಪಚಾರದ ಪರಿ, ಪದಾರ್ಥಗಳ ರುಚಿಯ ನೆನಪಿನ ಖುಷಿಯಲ್ಲಿ ಕಳೆದುಹೋಗುತ್ತಿದ್ದ. ಅಮ್ಮನ ನಿರಂತರ ಒತ್ತಡಕ್ಕೆ ಕ್ರಮೇಣ ಸ್ಟೀಲು ಪಾತ್ರೆಗಳು ಆಕ್ರಮಿಸಿಕೊಂಡರೂ ಹಳೆಯವನ್ನು ಮಾರದೆ ಒಳಗಿನಮೆತ್ತಿನ ಗೋಡೆಯಪಕ್ಕ ಜತನವಾಗಿಟ್ಟ. ಈಗೊಂದೆರಡು ವರ್ಷ ಹಿಂದೆ ತಾನು ನವರಾತ್ರಿಯಲ್ಲೊ ಅಥವಾ ದೀಪಾವಳಿ ಮುಂಚಿನದಿನವೊ, ದೂಳು ಹೊಡೆಯುವಾಗ ಈಗಿನ ಮಕ್ಕಳು ಅಳಿಯಂದಿರಿಗೆ ಉರಳಿಯಲ್ಲಿ ಕುದಿಸಿದ ಆಕಡೆ ಪಾಯಸದ ರುಚಿ ತೋರಿಸಬೇಕು ಅಂತ ಇದ್ದಕ್ಕಿದ್ದಂತೆ ಅನ್ನಿಸಿಬಿಟ್ಟಿತ್ತು. ಆದರೆ ಕಲಾಯಿಯೊಂದು ಮಾಡಿಸಬೇಕು ಅನ್ನುವುದು ಹೊಳೆದಿತ್ತು. 'ಕಲಗಾರ್ರು ಈಗೆಲ್ಲಿ ಸಿಗತಾರೆ... ಸ್ಟೀಲು ಪ್ಲಾಸ್ಟಿಕ್ಕು ಅದೆಂತದ್ದೋ ನಾನ್‌ಸ್ಟಿಕ್ಕು... ಅಂತದ್ದೇ ಈಗ. ಕಲಾಯಿ ತಲೆಗೆ ಹಾಕ್ಕೊಂಡರೇ ಸೈ...' ತೇರುಮನೆ ಎದುರು ನಿಂತು ನಸ್ಯವೇರಿಸುತ್ತ ನಕ್ಕಿದ್ದರು ಸುಬ್ಬಾ ಜೋಯ್ಸರು.

> 'ನಮಸ್ಕಾರ ವಡೇರಿಗೆ, ಅದೇ ನೋಡ್ತೆ!' ಸ್ವರ ಬಂದತ್ತ ತಿರುಗಿದವರಿಗೆ ಹಿಂದೆ, ಶುದ್ಧ ಕುಡಿಯುವನೀರು ಅಂತ ಬರೆದಲ್ಲಿ ನಿತ್ತವ ತನ್ನತ್ತಲೇ ಮಾತಾಡಿಸುವಂತೆ ನಗೆ ಬೀರಿದಾಗ ಯಾರು ಅಂತ ಕಣ್ಣು ಕಿರಿದಾಗಿಸಿಕೊಂಡು ಯೋಚನೆಗೆ ಬಿದ್ದರು.

'ನಾವೀಗ ಅಲ್ಲಿಲ್ಲವೊ... ಹೆಗಡೆಕಟ್ಟೆ ರಸ್ತೇಲಿ ನಮ್ಮಪ್ಪ ಅಡಕೆತೋಟ ಹಾಕ್ಸಿದ್ರು; ಮೂವತ್ತು ವರ್ಷನೆ ಆಯ್ತು...'

'ಮದ್ಲಿದ್ದಲ್ಲಿ ಇಲ್ವ... ಅದೇ ನೋಡ್ತೆ! ಯಾವೂರ್ರ ಈಗ?'

'ಕತ್ಲಗಾನು ಅಂತ; ಈಗ ಅಲ್ಲೂ ಐದಾರುಮನೆ ಆಗದೆ. ಸರಕಾರಿ ಬಸ್ಸು ಊರ ಏರಿವರೆಗೂ